**ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃ ಗೋಕಾಕ**

**ಸಾಕ್ಷಿಗೆ ದಿನಾಂಕಃ 03-08-2026 ರಂದು ಪ್ರಮಾಣ ವಚನ ಬೋಧಿಸಲಾಯಿತು**

C.C.No. 3465/2017

CW-1 PW-4

ಸಾಕ್ಷಿದಾರರ ಹೆಸರು - ರಾಯಗೊಂಡ ಸಿದ್ದಪ್ಪಾ ಜಾನಾರ

ವಯಸ್ಸು - 50 ವರ್ಷ

ಉದ್ಯೋಗ - ಪಿ ಐ ವಿಜಯಪೂರ ಗ್ರಾಮೀಣ ಪಿ.ಎಸ.

ಸಾಕೀನ - ವಿಜಯಪೂರ

**ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರಿಂದಃ** (ವಿ.ಸಿ. ಮುಖಾಂತರ)

1) ನಾನು ದಿಃ 02.12.2012 ರಿಂದ 08.08.2018 ರ ವರೆಗೆ ಗೋಕಾಕ ಶಹರ ಪೋಲಿಸ ಠಾಣೆಯಲ್ಲಿ ಪಿ.ಎಸ.ಆಯ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2) ಈ ಪ್ರಕರಣಕ್ಕೆ ಸಂಬಧಿಸಿದಂತೆ ದಿಃ 05-07-2017 ರಂದು ನಾನು ಮತ್ತು ಚಾಸಾ 4 ರಿಂದ 9 ರವರನ್ನು ಕರೆದುಕೊಂಡು ಇಲಾಖಾ ವಾಹನ ಸಂಖ್ಯೆ ಕೆಎ-22/ಜಿ 688 ರಲ್ಲಿ ಅಂಬಿಗೇರ ಗಲ್ಲಿ, ಬಣಗಾರ ಗಲ್ಲಿ, ಸಂಗಮನಗರಗಳಲ್ಲಿ ಗಸ್ತು ಕರ್ತವ್ಯಕ್ಕೆಂದು ಕರೆದುಕೊಂಡು ಹೋಗಿದ್ದಾಗ, ಜ್ಞಾನ ಮಂದಿರ ರಸ್ತೆಯಲ್ಲಿ ಒಂದು ಕಾರ ನಂಬರ ಎಮ ಎಚ್ 07/ಕ್ಯೂ 6750 ಕಾರಿನಲ್ಲಿ ಒಬ್ಬ ವ್ಯಕ್ತಿ ಹಿಂದೆ ಕುಳಿತಿದ್ದು, ಸುತ್ತ ಮೂರು ಜನ ನಿಂತಿದ್ದು ಅವರು ನಮ್ಮನ್ನು ನೋಡಿ ಗಾಬರಿಯಿಂದ ಕಾರನ್ನು ಹತ್ತಿಕೊಂಡು ಚಿಕ್ಕಹೊಳಿ ಬ್ರಿಡ್ಜ ಕಡೆಗೆ ಸದರಿ ಕಾರನ್ನು ತಿರುಗಿಸುವಷ್ಟರಲ್ಲಿ ನಾವು ನಮ್ಮ ವಾಹನವನ್ನು ಅಡ್ಡಲಾಗಿ

ನಿಲ್ಲಿಸಿ, ಕಾರಿನಲ್ಲಿರುವವರನ್ನು ವಿಚಾರಿಸಿದಾಗ ಅವರು ಯಾವುದೇ ಸಮರ್ಪಕ ಉತ್ತರ ನೀಡಲಿಲ್ಲ, ನಂತರ ಕಾರನ್ನು ಪರಿಶೀಲಿಸಿದಾಗ ಸನಮಾಯಿಕ ಪ್ಲಾವುಡನ ಪೆಟ್ಟಿಗೆ ಮತ್ತು ಒಂದು ರಿಮೋಟ ಇದ್ದು ಅವುಗಳ ಬಗ್ಗೆ ವಿಚಾರಿಸಿದಾಗ ಅವರು ಸರಿಯಾದ ಉತ್ತರ ನೀಡಲಿಲ್ಲ. ಆದಕಾರಣ ಸದರಿ ವ್ಯಕ್ತಿಗಳು ಭಾರಿ ಸ್ವರೂಪದ ಗುನ್ಹೆ ಮಾಡುವ ತಯಾರಿಯಲ್ಲಿರುವ ಬಗ್ಗೆ ಸಂಶಯ ಬಂದಿದ್ದರಿಂದ ನಾನು 4-30 ಗಂಟೆಗೆ ಸದರಿ ಕಾರಿನಲ್ಲಿದ್ದ ವ್ಯಕ್ತಿಗಳನ್ನು ವಶಕ್ಕೆ ಪಡೆದು, ಅವರ ಹೆಸರುಗಳನ್ನು ಕೇಳಲಾಗಿ ಅವರು ರಘುನಾಥ ವೆಂಕಪ್ಪಾ ಶಿಂಪ್ರಿ, ಮಹಾಲಿಂಗೇಶ್ವರ ನಗರ, ಗೋಕಾಕ, ಶ್ಯಾಮ ಅಪ್ಪಾ ಖಾಸಗರ, ಮಾಟೇವಾಡಿ, ಸಾವಂತವಾಡಿ, ಅನಂತ ಚಂದ್ರಕಾಂತ ಘಾಟಕರ, ಕುಡಾಲ ಬಿಂಗೋಳ್ಳಿ ಅಂತಾ ಹೇಳಿದ್ದು ಕೂಡಲೇ ನಾನು ಇಬ್ಬರು ವ್ಯಕ್ತಿಗಳನ್ನು ಪಂಚರನ್ನಾಗಿ ಬರಮಾಡಿಕೊಂಡು ಸ್ಥಳದಲ್ಲಿದ್ದ ಕಾರು, ರಿಮೋಟ ಮತ್ತು ಪೆಟ್ಟಿಗೆಯನ್ನು ಸಾಯಕಾಂಲ 4-45 ರಿಂದ 5-30 ಗಂಟೆಯವರೆಗೆ ಪಂಚನಾಮೆ ಜರುಗಿಸಿ ವಶಕ್ಕೆ ಪಡೆದುಕೊಂಡು, ಮುಂದುವರೆದು ಕಾರಿನಲ್ಲಿದ್ದ ವ್ಯಕ್ತಿಗಳನ್ನು ವಿಚಾರಿಸಿದಾಗ ಅವರು ಸಾರ್ವಜನಿಕರಿಗೆ ಯಾವುದಾದರೂ ಆಮಿಷ ಒಡ್ಡಿ ಹಣ ಪಡೆಯುತ್ತೇವೆ ಎಂದು ತಿಳಿಸಿದ್ದು, ನಂತರ ಠಾಣೆಗೆ ಬಂದು ದೂರನ್ನು ನೀಡಿರುತ್ತೇನೆ. ಸಾಕ್ಷಿಯು ದೂರಿನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ದೂರನ್ನು ನಿಪಿ-2 ಎಂದು ಗುರುತಿಸಲಾಯಿತು. ಸಾಕ್ಷಿಯು ಪಂಚನಾಮೆಯಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ 1 ರಿಂದ 3 ನೇ ಆರೋಪಿತರನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

ಸದರಿ ದಿನ ಜಪ್ತುಪಡಿಸಿಕೊಂಡ ಒಂದು ಪ್ಲಾವುಡ ಬಾಕ್ಸನ್ನು ಮತ್ತು ರಿಮೋಟ್ನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ. 1 ಮತ್ತು 2 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿ ಪರ ವಕೀಲರಿಂದಃ**

1) ನಾವು ಗಸ್ತು ಮಾಡುವಾಗ ಸಮಯ ಸಂಜೆ 4-30 ಗಂಟೆಯಾಗಿತ್ತು. ಆರೋಪಿತರ ಕಾರು ಸ್ಮಶಾನ ದಾಟಿ ಮಹಾಲಿಂಗೇಶ್ವರ ನಗರದ ಕಡೆ ಕಾಣಿಸಿರುತ್ತದೆ. ನಿಪಿ-2 ರಲ್ಲಿ ಮಹಾಲಿಂಗೇಶ್ವರ ನಗರದ ಕಡೆ ಸಂಶಾಯಸ್ಪದ ಕಾರು ಕಾಣಿಸಿರುತ್ತದೆ ಎಂದ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಸಂಶಾಯಸ್ಪದ ಕಾರಿನಲ್ಲಿ ನಾಲ್ಕು ಜನ ಇದ್ದರು. ಸದರಿ ನಾಲ್ಕು ಜನ ಕಾರು ಒಳಗಡೆ ಕುಳಿತಿದ್ದರು. ಚಾಸಾ-2 ಮತ್ತು 3 ರವರನ್ನು ಚಾಸಾ-5 ರವರು ಕರೆದುಕೊಂಡು ಬಂದಿರುತ್ತಾರೆ. ಚಾಸಾ-2 ಮತ್ತು 3 ರವರನ್ನು ಮಹಾಲಿಂಗೇಶ್ವರ ನಗರದಿಂದ ಕರೆದುಕೊಂಡು ಬಂದಿರುತ್ತಾರೆ. ಪಂಚರಿಗೆ ಘಟನೆಯ ಬಗ್ಗೆ ನಾನು ಸುಮಾರು 5 ರಿಂದ 10 ನಿಮಿಷ ತೆಗೆದುಕೊಂಡಿರುತ್ತೇನೆ. ಚಾಸಾ-2 ಮತ್ತು 3 ನಮ್ಮ ಠಾಣೆಯ ಖಾಯಂ ಪಂಚರು ಇರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರ ಕಾರಿನ ಬಣ್ಣ ನನಗೆ ನೆನಪಿರುವುದಿಲ್ಲ. ಪಂಚನಾಮೆಯನ್ನು ನಮ್ಮ ಠಾಣಾ ಸಿಬ್ಬಂದಿ ಬರೆದಿರುತ್ತಾರೆ ಆದರೆ ಅವರ ಹೆಸರು ನನಗೆ ನೆನಪಿರುವುದಿಲ್ಲ.

ನಿಪಿ-1ಕ್ಕೆ ದಸ್ತೂರ ಎಂದು ಸಹಿ ಇರುವುದಿಲ್ಲ. ಆರೋಪಿತರು ಮಹಾರಾಷ್ಟ್ರ ಮೂಲದವರು ಎಂದರೆ ಸರಿ ಅವರ ಪೈಕಿ 1 ನೇ ಆರೋಪಿ ಗೋಕಾಕ ನಗರದ ವಾಸಿಯಾಗಿರುತ್ತಾನೆ. ಜುಲೈ ತಿಂಗಳಿನಲ್ಲಿ ಗೋಕಾಕ ಫಾಲ್ಸ ನೋಡಲು ಸಾಕಷ್ಟು

ಸಾರ್ವಜನಿಕರು ಭೆಟ್ಟಿ ನೀಡುತ್ತಾರೆ ಎಂದರೆ ಸರಿ. ಅದೇ ರೀತಿ ಆರೋಪಿತರು ಸಹ ಫಾಲ್ಸಿ ನೋಡಲು ಬಂದಿದ್ದರು ಎಂದರೆ ಸರಿಯಲ್ಲ. 2017 ರ ಜುಲೈ ತಿಂಗಳಿನಲ್ಲಿ ಫಾಲ್ಸ ರಸ್ತೆಯ ಅಗಲೀಕರಣ ಕಾಮಗಾರಿ ಜಾರಿಯಲ್ಲಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿಕಾಮಗಾರಿಯು ಚಾಲ್ತಿಯಲ್ಲಿದ್ದ ಕಾರಣ ಘಟನಾ ಸ್ಥಳದಲ್ಲಿ ಸಾಕಷ್ಟು ವಾಹನ ದಟ್ಟನೆ ಇತ್ತು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಆರೋಪಿತರು ತಮ್ಮ ವಾಹನವನ್ನು ನಿಲ್ಲಿಸಿದ್ದು ಆಗ ನಮ್ಮ ಜೊತೆ ಗಲಾಟೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆ ಕಾರಣದಿಂದ ಆರೋಪಿತರ ವಿರುದ್ಧ ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಮು.ಮಾ. 1, 2 ಮತ್ತು ಆರೋಪಿತರಿಗೂ ಯಾವುದೇ ಸಂಬಂಧ ಇರುವುದಿಲ್ಲಾ ಎಂದರೆ ಸರಿಯಲ್ಲ. 2 ಮತ್ತು 3 ನೇ ಆರೋಪಿತರು ಶೇತ್ಕಿ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಠಾಣಾ ಅಂಕಿಸಂಖ್ಯೆಗೋಸ್ಕರ ಆರೋಪಿತರ ವಿರುದ್ಧ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಆರೋಪಿ ಪರ ವಕೀಲರಿಂದಃ**

1) ಸಂಗಮ ನಗರ ಗೋಕಾಕ ನಗರ ಪೋಲಿಸ ಠಾಣೆಯ ಉತ್ತರ ದಿಕ್ಕಿಗೆ ಇರುತ್ತದೆ ಎಂದರೆ ಸರಿ. ಮಹಾಲಿಂಗೇಶ್ವರ ನಗರ ಗೋಕಾಕ ನಗರ ಪೋಲಿಸ ಠಾಣೆಯ ದಕ್ಷಿಣ ದಿಕ್ಕಿಗೆ ಇರುತ್ತದೆ ಎಂದರೆ ಸರಿಯಲ್ಲ. ಮಹಾಲಿಂಗೇಶ್ವರ ನಗರ ನಮ್ಮ ಠಾಣೆಯಿಂದ ಸುಮಾರು 1.5 ರಿಂದ 2 ಕಿ.ಮೀ ಅಂತರದಲ್ಲಿ ಇರುತ್ತದೆ ಎಂದರೆ ಸರಿ. ನಮ್ಮ ಠಾಣೆಯಿಂದ ಚಿಕ್ಕಹೋಳಿ ಬ್ರಿಡ್ಜ ನೈರುತ್ಯ ದಿಕ್ಕಿಗೆ ಇರುತ್ತದೆ ಎಂದರೆ ಸರಿ. ನಮ್ಮ ಠಾಣೆಯಿಂದ ಜ್ಞಾನ ಮಂದಿರ 2 ರಿಂದ 2.5 ಕಿ.ಮೀ ಅಂತರದಲ್ಲಿ ಇರುತ್ತದೆ ಎಂದರೆ ಸರಿ. ನಮ್ಮ ಠಾಣೆಯಿಂದ ಸಂಗಮನಗರ, ಜ್ಞಾನಮಂದಿರ ಮಾರ್ಗವಾಗಿ ಚಿಕ್ಕಹೋಳಿ

ಬ್ರಿಡ್ಜಗೆ ಹೋಗಬೇಕಾದರೆ ಸುಮಾರು 35 ರಿಂದ 40 ನಿಮಿಷ ಬೇಕಾಗುತ್ತದೆ ಎಂರೆ ಸರಿಯಲ್ಲ. ರಸ್ತೆ ಅಗಲೀಕರಣ ಸಮಯದಲ್ಲಿ ಪ್ರವಾಸಿಗರಿಗೆ ಮತ್ತು ನಮಗೂ ಗಲಾಟೆಯ ನಡೆಯುತ್ತಿದ್ದಾಗ 1 ನೇ ಆರೋಪಿತ ಗಲಾಟೆ ನೋಡುತ್ತಿದ್ದನು ಎಂದರೆ ಸರಿಯಲ್ಲ. 1 ನೇ ಆರೋಪಿತ ಚಿಕ್ಕಹೋಳಿಯಿಂದ ತನ್ನ ಜಮೀನಿಗೆ ಹೋಗುತ್ತಿದ್ದನು ಎಂದರೆ ಸರಿಯಲ್ಲ. ಮು.ಮಾ.1, 5 ರಿಂದ 6 ಪೂಟ ಎತ್ತರ ಇರುತ್ತದೆ ಎಂದರೆ ಸರಿಯಲ್ಲ. ಮು.ಮಾ.1 ರಂತೆ ವಸ್ತು ಆರೋಪಿತರ ಕಾರಿನಲ್ಲಿ ಹಿಡಿಸುವುದಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿತನ ಯಾವುದೇ ತಪ್ಪ ಇರದಿದ್ದರೂ ಸಹಿತ ಆತನ ಮೇಲೆ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ–2ಕ್ಕೆ ನನ್ನ ಸಹಿ ಇರುವುದಿಲ್ಲಾ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

**Sd/-**

ಪ್ರ.ದಿ.&ನ್ಯಾದಂ., ಗೋಕಾಕ.